KLB/ADMN/550/202…

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಕಾರ್ಯಾಲಯ, ಕಲಬುರಗಿ ರವರ ನಡುವಳಿಗಳು.**

---

ವಿಷಯ:- ಶ್ರೀ ಗಂಗಾಧರ ಗ್ರೇಡ-2 ಕಾರ್ಯದರ್ಶಿ ಹಿಂದಿನ ಪ್ರಭಾರಿ ಪಂಚಾಯತ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ, ಹರವಾಳ ತಾ:ಜೇವರ್ಗಿ ರವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವ ಕುರಿತು.

ಉಲ್ಲೇಖ:- ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ಜೇವರ್ಗಿ ರವರ ಪ್ರಸ್ತಾವನೆ ಸಂಖ್ಯೆ:ತಾಪಂಜೇ:15ನೇ ಹಕಾ:ದೂರು:2024-25/705 ದಿನಾಂಕ:6-8-2024.

******

**ಪೀಠಿಕೆ:**

ಜೇವರ್ಗಿ ತಾಲೂಕಿನ ಹರವಾಳ ಗ್ರಾಮ ಪಂಚಾಯತಿಯಲ್ಲಿ 2023-24ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನವನ್ನು ನಿಯಮಬಾಹಿರವಾಗಿ 14ನೇ ಹಣಕಾಸು ಯೋಜನೆಯ ಹೆಸರಿನ ಮೇಲೆ ಕಾಮಗಾರಿಯನ್ನು ಕೈಗೊಳ್ಳದೇ ಪರಿತರಗಳನ್ನು ಖರೀದಿಸದೇ ಓಚರ ಸೃಜನೆ ಮಾಡಿ ಭಾರಿ ಅವ್ಯವಹಾರ ಮಾಡಿ ಹಣ ಲಪಟಾಯಿಸಿದ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಹಾಗೂ ಅಧ್ಯಕ್ಷರ ವಿರುದ್ಧ ಕ್ರಿಮಿನಲ್ ಮೊಕದ್ದಮ್ಮೆ ಹಾಕಿ ಹುದ್ದೆಯಿಂದ ವಜಾಗೊಳಿಸುವ ಶ್ರೀ ರವೀಂದ್ರ ನಾಟೀಕಾರ ತಾಲೂಕ ಅಧ್ಯಕ್ಷರು ಹಾಗೂ ಶ್ರೀ ಸಂತೋಷ ಎಸ್ ಭಾವಿಕಟ್ಟಿ ತಾಲೂಕ ಸಂಘಟನೆ ಕಾರ್ಯದರ್ಶಿಯವರು ದೂರು ಸಲ್ಲಿಸಿರುವ ಹಿನ್ನಲೆಯಲ್ಲಿ ಸದರಿ ದೂರಿನ ಕುರಿತು ಪರಿಶೀಲಿಸಿ ಶ್ರೀ ಗಂಗಾಧರ ಗ್ರೇಡ-2 ಕಾರ್ಯದರ್ಶಿ ಹಾಗೂ ಹಿಂದಿನ ಪ್ರಭಾರಿ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತ ಹರವಾಳ ತಾ:ಜೇವರ್ಗಿ ರವರು ಹರವಾಳ ಗ್ರಾಮ ಪಂಚಾಯತಿಯಲ್ಲಿ 2023-24ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನವನ್ನು ನಿಯಮಬಾಹಿರವಾಗಿ 14ನೇ ಹಣಕಾಸು ಯೋಜನೆಯ ಹೆಸರಿನ ಮೇಲೆ ಕಾಮಗಾರಿಯನ್ನು ಕೈಗೊಳ್ಳದೇ ಪರಿಕರಗಳನ್ನು ಖರೀದಿಸದೇ ಓಚರ್ ಸೃಜನೆ ಮಾಡಿ ಭಾರಿ ಅವ್ಯವಹಾರ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆಂದು ಸದರಿಯವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮಾವಳಿಗಳು-2021ರ ನಿಯಮ 3(1)(i)(ii)(iii)ರನ್ವಯ ಸದರಿಯವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಉಲ್ಲೇಖಿತ ಪ್ರಸ್ತಾವನೆ ಮೂಲಕ ಕೋರಿರುವ ಪ್ರಯುಕ್ತ ಸದರಿಯವರ ಮೇಲೆ ಶಿಸ್ತುಕ್ರಮ ಜರುಗಿಸಲು ನಿರ್ಣಯಿಸಿ ಈ ಕೆಳಕಂಡಂತೆ,

**:: ಆದೇಶ ::**

ಸಂಖ್ಯೆ:ಜಿಪಕ:ಆಡಳಿತ:ಗ್ರಾಪಂಕಾ:70:2024-25 ದಿನಾಂಕ:09-09-2024.

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ ಶ್ರೀ ಗಂಗಾಧರ ಗ್ರೇಡ-2 ಕಾರ್ಯದರ್ಶಿ ಗ್ರಾಮ ಪಂಚಾಯತ ಆಲೂರ ತಾ:ಯಡ್ರಾಮಿ (ಪ್ರಸ್ತುತ ಜೇವರ್ಗಿ ತಾಲೂಕಿನ ಕೆಲ್ಲೂರ ಗ್ರಾಮ ಪಂಚಾಯತ ನಿಯೋಜನೆ) ಹಿಂದಿನ ಪ್ರಭಾರಿ ಪಿಡಿಓ ಗ್ರಾಮ ಪಂಚಾಯತ ಹರವಾಳ ತಾ:ಜೇವರ್ಗಿ ರವರ ವಿರುದ್ಧದ ಆರೋಪಗಳಿಗೆ ಕುರಿತಂತೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10(1)(ಡಿ) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

ಮೇಲ್ಕಂಡ ನೌಕರರು ಅಮಾನತ್ತಿನ ಅವಧಿಯಲ್ಲಿ ನಿಯಮಾನುಸಾರ ಪಡೆಯಬಹುದಾದ ಜೀವನ ನಿರ್ವಹಣೆ ಭತ್ಯೆಯನ್ನು ಪಡೆಯಲು ಅನುಮತಿ ನೀಡಿದೆ ಹಾಗೂ ಅಮಾನತ್ತಿನ ಅವಧಿಯಲ್ಲಿ ಮೇಲಾಧಿಕಾರಿಗಳ ಪೂರ್ವಾನುಮತಿಯಿಲ್ಲದೆ ಕೇಂದ್ರಸ್ಥಾನ ಬಿಡ…

Signed by
Bhanwar Singh Meena
Date: 19-09-2024 13:14:34

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಕಲಬುರಗಿ.

**ಪ್ರತಿಯನ್ನು:**

1.ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕಾ ಪಂಚಾಯತ್, ಜೇವರ್ಗಿ/ಯಡ್ರಾಮಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ, ಸದರಿ ನೌಕರರ ಆರೋಪಗಳಿಗೆ ಸಂಬಂಧಿಸಿದಂತೆ ಅನುಬಂಧ-1ರಿಂದ 4 ರಲ್ಲಿ ಆರೋಪ ಪಟ್ಟಿಯನ್ನು ಸಿದ್ಧಪಡಿಸಿ, ಒಂದು ವಾರದೊಳಗಾಗಿ ಈ ಕಚೇರಿಗೆ ಸಲ್ಲಿಸಲು ಹಾಗೂ ಸದರಿಯವರ ಅಮಾನತ್ತಿನ ಕುರಿತು ಅವರ ಮೂಲ ಸೇವಾ ಪುಸ್ತಕದಲ್ಲಿ ಕಡ್ಡಾಯವಾಗಿ ನಮೂದಿಸಿ, ನಮೂದಿಸಿದ ವರದಿಯನ್ನು ತಕ್ಷಣವೇ ಜಿಲ್ಲಾ ಪಂಚಾಯತ, ಕಛೇರಿಗೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

2. ಸಂಬಂಧಪಟ್ಟ ಸಿಬ್ಬಂದಿಯವರಿಗೆ ಅವರು ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ ಮುಖ್ಯಸ್ಥರ ರವರ ಮುಖಾಂತರ.

3. ಕಛೇರಿ ಕಡತಕ್ಕೆ.